ಶ್ರೀ ಕಾಗೋಡು ತಿಮ್ಮಪ್ಪ : ಉತ್ತರದಲ್ಲಿ ಅದನ್ನೇ ಹೇಳಬಹುದಿತ್ತಲ್ಲಾ. ನಾವು ನೋಟೀಸ್ ಕೊಟ್ಟಿದ್ದೇವೆ, ತಿಳಿವಳಿಕೆ ಕೊಟ್ಟಿದ್ದೇವೆಂದು ಹೇಳಬಹುದಿತ್ತಲ್ಲಾ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿರಿಯ ಅಧಿಕಾರಿಗಳು ಕಾರ್ಖಾನೆಗಳಿಗೆ ಭೇಟಿ ನೀಡಿ ಅಲ್ಲಿರತಕ್ಕ ಲೋಪದೋಷಗಳನ್ನು ಪತ್ತೆಮಾಡಿ ಎಚ್ಚರಿಕೆ ಕೊಟ್ಟು ಸರಿಪಡಿಸತಕ್ಕ ಕೆಲಸ ಮಾಡಿದ್ದಾರೆ. ಮತ್ತೆ ಅವರು ಪುನರಾವರ್ತನೆ ಮಾಡಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನೀವು ಏನು ಉತ್ತರ ಕೊಟ್ಟಿದ್ದೀರಿ ಅದರ ಪ್ರಕಾರ ಇದ್ದರೆ ನಮ್ಮ ಆಕ್ಷೇಪಣೆ ಇಲ್ಲ. ಇಲ್ಲದಿದ್ದರೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ? ಮಾನ್ಯ ಅಧ್ಯಕ್ಷರು ಮಧ್ಯ ಮಾತನಾಡಿದ್ದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗಲಿಲ್ಲ. ನೀವು ಇಲ್ಲಿ ಕೊಟ್ಟಿರತಕ್ಕ ಉತ್ತರದ ಪ್ರಕಾರ ಯಾವ ಕಾರ್ಖಾನೆಗಳಿಗೂ ಸಂಬಂಧಪಟ್ಟವರು ಭೇಟಿ ಕೊಟ್ಟಿಲ್ಲ. ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕು ಆ ಸೌಲಭ್ಯಗಳನ್ನು ಎಷ್ಟು ಕಾರ್ಖಾನೆಗಳಿಗೆ ಕೊಟ್ಟಿದೆ ಎಂದು ತನಿಖೆ ಮಾಡಿ. ನಾನು ಹೇಳಿರುವುದು ಸರಿಯೇ ಅಥವಾ ಅವರು ಹೇಳಿರುವುದು ಸರಿಯೇ ಎಂದು ನೋಡಿ. ಯಾವುದೋ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದ ಆಧಾರದ ಮೇಲೆ ಹೇಳುವುದು ಬೇಡ.

ಶ್ರೀ ಸಿದ್ದರಾಮಯ್ಯ : ಅಂಥದ್ದನ್ನು ನೀವು ನಮ್ಮ ಗಮನಕ್ಕೆ ತಂದರೆ ನಾವು ಕ್ರಮ ಕೈಗೊಳ್ಳುತ್ತೇವೆ.

## ಹಾವೇರಿ ಜಿಲ್ಲೆಯ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿ

370-ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1996-97 ಹಾಗೂ 97-98ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿಯಲ್ಲಿ ಹಾವೇರಿ ಜಿಲ್ಲೆಯಲ್ಲಿ ತೆಗೆದುಕೊಂಡ ಕೆಲಸಗಳು ಯಾವುವು? ರಸ್ತೆಗಳಿಗೆ ಖರ್ಚಾದ ಹಣವೆಷ್ಟು? (ವಿವರ ನೀಡುವುದು)*

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1996-97 ಹಾಗೂ 97-98ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾರ್ಯಕ್ರಮದ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ | 3 : 97ರ ವರೆಗಿನ ಖರ್ಚು | 97-98ನೇ ಸಾಲಿನ ಖರ್ಚು | ಒಟ್ಟಾರೆ ಖರ್ಚು |
|---|---|---|---|---|---|
| 1) | ಬ್ಯಾಡಗಿ ತಾಲ್ಲೂಕಿನಲ್ಲಿ ಕಬ್ಬೂರ ಮಲ್ಲೂರ ಕ್ರಾಸ್‌ನಿಂದ ಹರಿಹರ ಸಮ್ಮಸಗಿ ರಸ್ತೆಗೆ ಕೂಡು ರಸ್ತೆ (ಸೋಡಂಬಿ ಚಿಕ್ಕಬಾಸುರ ಮಾರ್ಗ ಕಿ.ಮೀ. 3 ರಿಂದ 16.36ರ ವರೆಗೆ ಆಯ್ದ ಭಾಗಗಳಲ್ಲಿ ಅಗಲಗೊಳಿಸಿ ಡಾಂಬರೀಕರಣ ಮಾಡುವುದು. | 15.00 | 16.29 | 0.08 | 16.37 |
| 2) | ಹಾನಗಲ್ ತಾಲ್ಲೂಕು ಸಂಗೂರು ತಿಳವಳ್ಳಿ ಅನವಟ್ಟಿ ರಸ್ತೆ ಕಿ.ಮೀ. 5.5 ರಿಂದ 16 ರವರೆಗೆ ಮರು ಖಡೀಕರಣ ಹಾಗೂ ಡಾಂಬರೀಕರಣ. | 25.00 | 32.52 | 5.80 | 38.32 |
| | **ಒಟ್ಟು** | **40.00** | **48.81** | **5.88** | **54.69** |

ಎರಡೂ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, 1996-97 ಮತ್ತು 97-98ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿಗೆ ಹಾವೇರಿ ಜಿಲ್ಲೆಯಲ್ಲಿ ಯಾವ ಯಾವ ಕಾರ್ಯಕ್ರಮ ಕೈಗೊಂಡಿದ್ದೀರೆಂದು ಕೇಳಿದ್ದೇನೆ. ಆದರೆ ಮಾನ್ಯ ಮಂತ್ರಿಗಳು 1996-97 ಮತ್ತು 97-98 ಎಂದು ಸ್ಪೆಸಿಫಿಕ್ ಆಗಿ ಹೇಳಿಲ್ಲ. ಎರಡು ವರ್ಷಗಳಲ್ಲಿ ತಾವು ಯಾವ ಯಾವ ತಾಲ್ಲೂಕುಗಳಲ್ಲಿ ಪ್ರತ್ಯೇಕವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಈ ಒಂದು ರಸ್ತೆ ಕೇವಲ ಹಾನಗಲ್ ತಾಲ್ಲೂಕು ಮತ್ತು ಹಾನಗಲ್ ತಾಲ್ಲೂಕಿನ ಬಾರ್ಡರ್‌ಗೆ ಸೀಮಿತವಾಗಿದೆ. ಇವತ್ತಿನ ದಿವಸ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಒಯ್ಯುವುದಕ್ಕೆ ಎಲ್ಲಾ ತಾಲ್ಲೂಕುಗಳಲ್ಲಿ ರಸ್ತೆಗಳು ಹಾಳಾಗಿವೆ. ಆದುದರಿಂದ ತಾವು ಎಲ್ಲಾ ತಾಲ್ಲೂಕುಗಳಲ್ಲಿ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 1996-97 1997-98ನೇ ಸಾಲಿನಲ್ಲಿ ಬೇರೆ ಬೇರೆ ಹಣವನ್ನು ನಿಗದಿಪಡಿಸಲಾಗಿದೆಯೇ ಹೇಗೆ ಎಂದು ಕೇಳಿದ್ದಾರೆ. ಆದರೆ 1997-98ನೇ ಸಾಲಿನಲ್ಲಿ ಮಾತ್ರ 40ಲಕ್ಷ ರೂಪಾಯಿ ಹಣವನ್ನು ದೊರಕಿಸಿಕೊಡುವ ವ್ಯವಸ್ಥೆಯಾಗಿದೆ. ಬ್ಯಾಡಗಿ ಮತ್ತು ಹಾನಗಲ್ ತಾಲ್ಲೂಕಿನ ಎರಡೂ ತಾಲ್ಲೂಕಿನ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ

ಬರುವಂತಹ ರಸ್ತೆಗಳನ್ನು ತೆಗೆದು ಗಮನದಲ್ಲಿಟ್ಟುಕೊಂಡು ಅಲ್ಲಿ ಕಾರ್ಖಾನೆಯವರು ಸೂಚಿಸಿರುವಂತಹ ರಸ್ತೆಗಳನ್ನು ತೆಗೆದುಕೊಂಡು ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡಲಾಗಿದೆ. ಜೊತೆಗೆ 1997-98ನೇ ಸಾಲಿಗೆ ನಾವು ಹಣವನ್ನು ಒದಗಿಸಿಲ್ಲ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಮಂತ್ರಿಗಳು ಅಯವ್ಯಯದಲ್ಲಿ 1997-98ಕ್ಕೆ ಹಣವನ್ನು ನಿಗದಿ ಮಾಡಿದ್ದೀರೋ ಇಲ್ಲವೊ?

ಶ್ರೀ ಸಿ.ಎಂ. ಉದಾಸಿ : ನಾನು ಆಗಲೇ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಯು.ಬಿ. ಬಣಕಾರ್ : ಕಳೆದ ವರ್ಷ ಹಣವನ್ನು ನಿಗದಿ ಮಾಡಲಿಲ್ಲ. ರೈತರು ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಒಯ್ಯಲು ತೊಂದರೆಯಾಯಿತು. ಈ ವರ್ಷವಾದರೂ ರಸ್ತೆ ಅಭಿವೃದ್ಧಿಪಡಿಸುವುದಕ್ಕೆ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವಂತಹ ರಸ್ತೆಗಳ ಸುಧಾರಣೆಗೆ ಹಣವನ್ನು ಒದಗಿಸುವಂತಹ ಕಾರ್ಯಕ್ರಮವನ್ನು ರೂಪಿಸಲಾಗಿದೆ.

## ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಿವೇಶನ ಮಂಜೂರಾತಿಗಾಗಿ ಅರಣ್ಯ ಇಲಾಖೆಯ ಒಪ್ಪಿಗೆ

371- ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಿವೇಶನ ಮಂಜೂರಾತಿಗಾಗಿ ಅರಣ್ಯ ಇಲಾಖೆ ಒಪ್ಪಿಗೆ ಕೇಳಿ ಎಷ್ಟು ಅರ್ಜಿಗಳು ಬಂದಿವೆ? (ವಲಯವಾರು ವಿವರ ನೀಡುವುದು)?*

ಆ) *ಈ ಅರ್ಜಿಗಳು ಎಷ್ಟು ಸಮಯದಿಂದ ಇಲಾಖೆಯಲ್ಲಿ ಬಾಕಿ ಉಳಿದಿರುತ್ತದೆ?*

ಇ) *ಹಾಗಿದ್ದಲ್ಲಿ ಬಡವರಿಗೆ ನಿವೇಶನ ನೀಡುವಲ್ಲಿ ಅನಾದರಣೆಯನ್ನು ತೋರಿಸಿ ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರವು ಯಾವ ಶಿಸ್ತು ಕ್ರಮ ಕೈಗೊಳ್ಳಲಾಗುವುದು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) 424 ಅರ್ಜಿಗಳು.

| ಕ್ರ.ಸಂ. | ವಲಯ | ಅರ್ಜಿಗಳ ಸಂಖ್ಯೆ |
|---|---|---|
| 1) | ಆಗುಂಬೆ ವಲಯ | 2 |
| 2) | ಮಂಡಗದ್ದೆ ವಲಯ | 55 |
| 3) | ತೀರ್ಥಹಳ್ಳಿ ವಲಯ | 367 |
| 4) | ರಿಪ್ಪನ್‌ಪೇಟೆ ವಲಯ | - |
| | **ಒಟ್ಟು** | **424** |